O.S.63/2009

PW-1

ದಿ. 09.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ- 3 ರಿಂದ 6 ಮತ್ತು 8 ರಿಂದ 10 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ.ಕೆಬಿಕೆ ರವರಿಂದಃ-**

1.ಕಾಡೇಗೌಡರ 3 ನೇ ಮಗಳಾದ ಬೂರಮ್ಮ ರವರು ಯಾವಾಗ ಮರಣ ಹೊಂದಿದರು ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು 1975 ರಲ್ಲಿ ಮರಣ ಹೊಂದಿರುತ್ತಾರೆ, ತಿಂಗಳು ದಿನಾಂಕ ನನಗೆ ಗೊತ್ತಿಲ್ಲ ಕಾರಣ ಆಗ ನಾನು 3 ತಿಂಗಳ ಮಗು ಎಂದು ನುಡಿಯುತ್ತಾರೆ. ಕಾಡೇಗೌಡರ 2 ನೇ ಹೆಂಡತಿಯಾದ ಚಾಮಮ್ಮರವರು ಯಾವಾಗ ಮರಣ ಹೊಂದಿದರು ಎನ್ನುವುದು ನನಗೆ ಗೊತ್ತಿಲ್ಲ. ಕಾಡೇಗೌಡರ ಗಂಡು ಮಕ್ಕಳಾದ ಮಾದೇಗೌಡ ಮತ್ತು ಚಿಕ್ಕೇಗೌಡರು 1983-84 ರಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ವಿಭಾಗದ ಪ್ರಕಾರ ಎಂಆರ್ ನಂ.14/83-84 ರಂತೆ ಮಾದೇಗೌಡರ ಹೆಸರಿಗೆ ಖಾತೆ ಬಂದಿರುತ್ತದೆ ಎಂದರೆ ಸರಿ. ಸದರಿ ಖಾತೆಯನ್ನು ಪ್ರಶ್ನಿಸಿ ನಾನು ಎಲ್ಲಿಯೂ ಕೇಸ್ ಹಾಕಿಲ್ಲ. ಮಾದೇಗೌಡರ ಮರಣದ ನಂತರ ಆತನ ಹೆಂಡತಿಯಾದ ತುಳಸಮ್ಮರವರ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ಸರಿ. ತುಳಸಮ್ಮರವರ ಮರಣದ ನಂತರ ಸದರಿ ಖಾತೆ ಅವರ ಮಕ್ಕಳ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ.

2. ಸಾಮಾನ್ಯವಾಗಿ ಆಸ್ತಿಯನ್ನು ಖರೀದಿಸುವಾಗ ಆ ಆಸ್ತಿಗೆ ಸಂಬಂಧಿಸಿದ ಖರೀದಿ ಪತ್ರ ಇತರೆ ಎಲ್ಲಾ ಕಾಗದ ಪತ್ರಗಳನ್ನು ಪರಿಶೀಲಿಸಿ ಖರೀದಿಸುತ್ತಾರೆ ಎಂದರೆ ಸರಿ.

PW-1

ಎಲ್ಲಾ ದಾಖಲೆಗಳು ಸರಿ ಇದ್ದಾಗ ಮಾತ್ರ ಆಸ್ತಿಯನ್ನು ಖರೀದಿಸುತ್ತಾರೆ ಎಂದರೆ ಸರಿ. ಈ ದಾವೆಯನ್ನು ಹೂಡುವುದಕ್ಕೂ ಮೊದಲೇ ತುಳಸಮ್ಮ ಮತ್ತು ಆಕೆಯ ಮಗಳಾದ ಮಂಜುಳ ರವರು ದಾವಾ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕಾಡೇಗೌಡರ ವಂಶಕ್ಕಾಗಲೀ, ಮಾದೇಗೌಡ ಮತ್ತು ಚಿಕ್ಕೇಗೌಡರ ವಂಶಕ್ಕಾಗಲೀ ನಾನು ಯಾವುದೇ ರೀತಿಯಿಂದ ಸಂಬಂಧ ಹೊಂದಿಲ್ಲ ಎಂದರೆ ಸರಿಯಲ್ಲ. ನಾನು ಬೂರಮ್ಮರವರಿಗೆ ಆಗಲೀ ಚಾಮಮ್ಮರವರಿಗೆ ಆಗಲೀ ಯಾವುದೇ ಪ್ರಕಾರವಾಗಿ ಸಂಬಂಧವಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಆಕೆಯ ಮಗಳಾದ ಮಂಜುಳ ರವರು ಬರೆದುಕೊಟ್ಟ ಖರೀದಿ ಪತ್ರವನ್ನು ಪ್ರಶ್ನಿಸಿ ನೀವು ಯಾವುದೇ ದಾವೆಯನ್ನು ಹೂಡಿಲ್ಲ ಎಂದರೆ ಸಾಕ್ಷಿಯು ಹೂಡಿದ್ದೇನೆ ಎಂದು ನುಡಿಯುತ್ತಾರೆ. ಈ ರೀತಿ ಖರೀದಿ ಪತ್ರವನ್ನು ಪ್ರಶ್ನಿಸಿ ಹೂಡಿದ ದಾವೆಯ ನಂಬರ್ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ನನ್ನ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಪ್ರಕಾರವಾದ ಹಕ್ಕು ಅಧಿಕಾರ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಮತ್ತು ಪ್ರತಿವಾದಿಗಳೊಂದಿಗೆ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ

ಓ ಹೇ ಕೇ ಸರಿ ಇದೆ

(ರಾಧಾ ಎಸ್ )
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ .